-37-

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.68/2018/ಉನಿವಿ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 3.12.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ನಾಗಮಂಗಲ ತಾಲ್ಲೂಕು ತಿರುವನಹಳ್ಳಿ ಗ್ರಾಮದಲ್ಲಿ ಟಿ.ಎನ್.ಚಂದ್ರಶೇಖರ್ ಬಿನ್ ನಾರಾಯಣ ಗೌಡ ಅವರು ನಡೆಸುತ್ತಿರುವ ಅಕ್ರಮ ಗಣಿಗಾರಿಕೆ ತಡೆಯಲು ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ. ಶ್ರೀಧರ್, ತಂದೆ ದೇವರಾಜ್ ತಿರುಗನಹಳ್ಳಿ ನಿವಾಸಿ, ಮಂಡ್ಯ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ ನಾಗಭೂಷಣ್, ಹಿರಿಯ ಭೂವಿಜ್ಞಾನಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ಮಂಡ್ಯ ತಾಲ್ಲೂಕು,, (ಇನ್ನು ಮುಂದೆ "ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2) **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ, ನಾಗಮಂಗಲ ತಾಲ್ಲೂಕು ತಿರುವನಹಳ್ಳಿ ಗ್ರಾಮದಲ್ಲಿ ಟಿ.ಎನ್.ಚಂದ್ರಶೇಖರ್ ಬಿನ್ ನಾರಾಯಣ ಗೌಡ ಅವರು ಸುಮಾರು ವರ್ಷಗಳಿಂದ ತಿರುವನಹಳ್ಳಿ ಗ್ರಾಮದಲ್ಲಿ ವೆಂಕಟೇಶ್ವರ ಜಲ್ಲಿ ಕ್ರಷರ್ ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದಾರೆ ಮತ್ತು ಊರಿಗೆ ಹತ್ತಿರದಲ್ಲಿರುವ ಸ.ನಂ.80 ಮತ್ತು 138ರಲ್ಲಿ ಅಕ್ರಮವಾಗಿ ಗಣಿಗಾರಿಕೆಯನ್ನು ಸಹ ಮಾಡುತ್ತಿದ್ದಾರೆ. ಸದರಿ ಪ್ರದೇಶದಲ್ಲಿ ಬಂಡೆಗಳಿಗೆ ಸಿಡಿಮದ್ದನ್ನು ಸಿಡಿಸಿದಾಗ ಭೂಕಂಪದಂತೆ ನೆಲ ಕಂಪಿಸಿ ತಮ್ಮ ಊರಿನ ಮನೆಗಳ ಗೋಡೆಗಳು ಬಿರುಕು ಬಿಟ್ಟು ಗಂಭೀರ ಹಾನಿ ಉಂಟಾಗಿದೆ. ಸಿಡಿಮದ್ದಿನ ಶಬ್ದದಿಂದ ಜಾನುವಾರುಗಳು ಹಾಗೂ ಚಿಕ್ಕಮಕ್ಕಳು ಅಪಾಯದಲ್ಲಿರುತ್ತವೆ. ಹಾಗೂ ಕೆಲ ವ್ಯಕ್ತಿಗಳಿಗೆ ಹೃದಯ ಸಂಬಂಧ ರೋಗಗಳು ಬರುವ ಸಂಭವವಿರುತ್ತದೆ. ಆದ್ದರಿಂದ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಮಂಡ್ಯ ಜಿಲ್ಲಾಧಿಕಾರಿಗಳಿಗೆ ದಿ.9.11.2017ರಂದು ಅರ್ಜಿ ಸಲ್ಲಿಸಿದಾಗ ಜಿಲ್ಲಾಧಿಕಾರಿಗಳು ಎದುರುದಾರರಿಗೆ ಅರ್ಜಿಯ ಮೇಲೆ ಕ್ರಮಕೈಗೊಳ್ಳಲು ತಿಳಿಸಿದ್ದರೂ ಕೂಡ ಎದುರುದಾರರು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಕಾರಣ ಎದುರುದಾರರ

ವಿರುದ್ಧ ಸೂಕ್ತ ಕ್ರಮಕೈಗೊಂಡು ಅಪಾಯಕಾರಿ ಗಣಿಗಾರಿಕೆಯನ್ನು ಶಾಶ್ವತವಾಗಿ ನಿಲ್ಲಿಸುವಂತೆ ಕ್ರಮಕೈಗೊಳ್ಳಬೇಕೆಂದು ಕೋರಿದ್ದಾರೆ.

3. ದೂರಿನ ಜೊತೆಗೆ ಮಂಡ್ಯ ಜಿಲ್ಲಾಧಿಕಾರಿಗಳಿಗೆ ದಿ.18.11.2017ರಂದು ಸದರಿ ಟಿ.ಎನ್.ಚಂದ್ರಶೇಖರ್ ಬಿನ್ ನಾರಾಯಣಗೌಡ ನಡೆಸುತ್ತಿರುವ ಅಕ್ರಮ ಗಣಿಗಾರಿಕೆ ವಿರುದ್ಧ ನೀಡಿದ ದೂರಿನ ಪ್ರತಿಯನ್ನು, ಕಲ್ಲು ಗಣಿಗಾರಿಕೆ ಮಾಡಿದೆ ಎನ್ನಲಾದ ಪ್ರದೇಶದ 2 ಕಲರ್ ಫೋಟೋಗಳನ್ನು, ಮನೆಯ ಗೋಡೆಗೆ ಬಿರುಕು ಬಿಟ್ಟಿರುವ 7 ಕಲರ್ ಫೋಟೋಗಳನ್ನು ಹಾಜರುಪಡಿಸಿರುತ್ತಾರೆ.

4. ಎದುರುದಾರರು ದಿ.16.7.2018ರಂದು ಸಲ್ಲಿಸಿದ ತಮ್ಮ ಆಕ್ಷೇಪಣೆಯಲ್ಲಿ ದೂರಿನ ಆಪಾದನೆಗಳನ್ನು ಅಲ್ಲಗಳೆದು ಟಿ.ಎನ್.ಚಂದ್ರಶೇಖರ್ ತಿರುಗನಹಳ್ಳಿ ಗ್ರಾಮ ಇವರಿಗೆ ದಿ.24.3.2014ರಂದು ಸ.ನಂ.141ರಲ್ಲಿ 3.30 ಎಕರೆ ಪ್ರದೇಶದಲ್ಲಿ ಪರಿಸರ ಇಲಾಖೆ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯತಿಯಿಂದ ಅನುಮತಿ ಪಡೆದು ಕ್ರಷರ್ ಘಟಕವನ್ನು ಸ್ಥಾಪಿಸಿದ್ದು, ಚಂದ್ರಶೇಖರ್ ಅವರು ಸದರಿ ಪ್ರದೇಶವನ್ನು ಸುರಕ್ಷಿತ ವಲಯ ಘೋಷಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ನಂತರ ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2013, ನಿಯಮ 6(1)ರಂತೆ ಜಂಟಿ ಇಲಾಖಾ ತಪಾಸಣೆ ಮಾಡಿದಾಗ ಚಂದ್ರಶೇಖರ್ ಅವರು ನಿಯಮ 6(1)ರ ಎಲ್ಲ ಷರತ್ತುಗಳನ್ನು ಪೂರೈಸಿದ್ದಾರೆ. ಕಾರಣ ಸದರಿ ಪ್ರದೇಶ ಸುರಕ್ಷಿತ ವಲಯ ಪಾಲನಾ ಪ್ರಮಾಣಪತ್ರ (ಫಾರ್ಮ್-ಬಿ.1) ಜಿಲ್ಲಾ ಕಲ್ಲುಪುಡಿ ಘಟಕಗಳ ಲೈಸೆನ್ಸಿಂಗ್ ಪ್ರಾಧಿಕಾರದಿಂದ ನೀಡಲಾಗಿರುತ್ತದೆ. ಸದರಿ ಚಂದ್ರಶೇಖರ್ ಅವರು ನಿಯಮ 6(ಎ)ರಂತೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಶೀಲಿಸಿ ಕಾರ್ಯಾಚರಣೆ ಅನುಮತಿ ಪ್ರಮಾಣ ಪತ್ರವನ್ನು (ಸಿ.ಎಫ್.ಒ.) ಪಡೆದಿರುತ್ತಾರೆ.

5. ಎದುರುದಾರರು ಮುಂದುವರೆದು ಚಂದ್ರಶೇಖರ್ ಅವರಿಗೆ ಕಲ್ಲುಗಣಿ ಗುತ್ತಿಗೆ ಸಂ.1040ನ್ನು ತಿರುಗನಹಳ್ಳಿ ಗ್ರಾಮದ ಸ.ನಂ.75ರಲ್ಲಿ 1 ಎಕರೆ ವಿಸ್ತೀರ್ಣಕ್ಕೆ ಮಂಜೂರಾತಿಯನ್ನು ದಿ.31.3.2020ರವರೆಗೆ ನೀಡಿರುತ್ತದೆ. ಮುಂದುವರೆದು, ಚಂದ್ರಶೇಖರ್ ಅವರು ನಡೆಸುತ್ತಿರುವ ಕಲ್ಲುಗಣಿಗಾರಿಕೆ ಪ್ರದೇಶಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದಾಗ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದರಿಂದ ದಿ.31.5.2016ರಂದು ರೂ.1,62,000/-, ದಿ.1.3.2017ರಂದು ರೂ. 3.24 ಲಕ್ಷಗಳು ಮತ್ತು ದಿ.19,.7.2017ರಂದು 22.50 ಲಕ್ಷ ಒಟ್ಟು ರೂ.27. 36 ಲಕ್ಷ ದಂಡ ವಿಧಿಸಿದ್ದು ಸದರಿಯವರು ರೂ.11,24,000/- ದಂಡವನ್ನು ಪಾವತಿಸಿರುತ್ತಾರೆಂದು ತಿಳಿಸಿರುತ್ತಾರೆ. ಕಾರಣ ಪ್ರಸ್ತುತ ದೂರನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

6. ಆಕ್ಷೇಪಣೆಯ ಜೊತೆಗೆ ದಿ.26.12.2017ರಂದು ಲೈಸೆನ್ಸಿಂಗ್ ಅಧಿಕಾರಿಗಳು ನೀಡಿದ certificate of compliance ಪತ್ರದ ಪ್ರತಿಯನ್ನು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ದಿ.4.7.2018ರಂದು ನೀಡಿದ ಅನುಮತಿ

ಪತ್ರದ ಪ್ರತಿಯನ್ನು, ಚಂದ್ರಶೇಖರ್ ಎನ್ನುವವರು ದಂಡ ಪಾವತಿಸಿದ ಬಗ್ಗೆ 3 ರಸೀದಿಗಳ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

7. ದೂರು, ಆಕ್ಷೇಪಣೆ, ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ದೂರಿನಲ್ಲಿ ಟಿ.ಎನ್.ಚಂದ್ರಶೇಖರ್ ಎನ್ನುವವರು ನಾಗಮಂಗಲ ತಾ.ತಿರುವನಹಳ್ಳಿ ಗ್ರಾಮದ ಸ.ನಂ.80 ಮತ್ತು 138ರಲ್ಲಿ ಅಕ್ರಮವಾಗಿ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ ಮತ್ತು ಸದರಿ ಗಣಿಗಾರಿಕೆಯಲ್ಲಿ ಸಿಡಿಮದ್ದನ್ನು ಉಪಯೋಗಿಸುತ್ತಿದ್ದಾರೆಂದು ಆಪಾದಿಸಿರುತ್ತಾರೆ. ಈ ಬಗ್ಗೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಚಂದ್ರಶೇಖರ್ ಅವರು ತಿರುವನಹಳ್ಳಿ ಗ್ರಾಮದ ಸ.ನಂ.141ರಲ್ಲಿ ಕಲ್ಲುಪುಡಿ ಘಟಕವನ್ನು ಸ್ಥಾಪಿಸಿದ್ದಾರೆ ಮತ್ತು ಸದರಿ ಪ್ರದೇಶವನ್ನು ಸುರಕ್ಷಿತ ವಲಯ ಎಂದು ಘೋಷಿಸಲು ಅರ್ಜಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಚಂದ್ರಶೇಖರ್ ಅವರ ಅರ್ಜಿಯ ಮೇರೆಗೆ ಜಂಟಿ ಇಲಾಖಾ ತಪಾಸಣೆ ನಡೆಸಿದಾಗ ಸದರಿಯವರ ಕಲ್ಲು ಪುಡಿ ಘಟಕ ರಾಷ್ಟ್ರೀಯ ಹೆದ್ದಾರಿ ನಂ.85ರಿಂದ 203 ಮೀಟರ್, ಪ್ರಧಾನ ಜಿಲ್ಲಾ ರಸ್ತೆಗಳಿಂದ 270 ಮೀಟರ್, ತಿರುವನಹಳ್ಳಿ ಕಂದಾಯ ಗ್ರಾಮದಿಂದ 867 ಮೀಟರ್, ಅರಣ್ಯ ಜಮೀನಿನಿಂದ 6 ಕಿ.ಮೀ ಅಂತರದಲ್ಲಿರುವುದರಿಂದ ಸದರಿ ಕಲ್ಲುಪುಡಿ ಘಟಕ ನಿಯಮಾನುಸಾರ ಷರತ್ತು ಪೂರೈಕೆ ಮಾಡಿದ್ದರಿಂದ ಸುರಕ್ಷಿತ ವಲಯ ಪಾಲನಾ ಪ್ರಮಾಣಪತ್ರವನ್ನು (ಫಾರ್ಮ್-ಬಿ) ಲೈಸೆನ್ಸಿಂಗ್ ಪ್ರಾಧಿಕಾರ ನೀಡಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಎದುರುದಾರರು ಟಿ.ಎನ್.ಚಂದ್ರಶೇಖರ್ ಅವರಿಗೆ ನೀಡಿದ ಫಾರ್ಮ-ಬಿ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ಸದರಿ ಫಾರ್ಮ್-ಬಿ ಅನ್ನು ಯಾವ ದಿನಾಂಕದಂದು ನೀಡಿರುತ್ತಾರೆಂದು ಸ್ಪಷ್ಟವಾಗಿ ತಿಳಿಸಿರುವುದಿಲ್ಲ.

8. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಟಿ.ಎನ್.ಚಂದ್ರಶೇಖರ್ ಅವರು ಸರ್ವೆ ನಂ.141ರಲ್ಲಿ ಕಲ್ಲುಪುಡಿ ಘಟಕ ಸ್ಥಾಪಿಸಲು ಪರಿಸರ ಇಲಾಖೆ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯತಿಯಿಂದ ಅನುಮತಿ ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ಗ್ರಾಮ ಪಂಚಾಯತಿಯವರು ನೀಡಿದ ಅನುಮತಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಕಲ್ಲುಪುಡಿ ಘಟಕ ಸ್ಥಾಪಿಸಲು ಗ್ರಾಮ ಪಂಚಾಯತಿಗೆ ಅನುಮತಿ ನೀಡಲು ಯಾವುದೇ ಅಧಿಕಾರ ಇರುವುದಿಲ್ಲ. ಎದುರುದಾರರು ಹಾಜರುಪಡಿಸಿದ ಕರ್ನಾಟಕ ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿಯವರು ನೀಡಿದ ಅನುಮತಿ ಪತ್ರ ದಿ.14.7.2018 ಆಗಿರುತ್ತದೆ. ಆದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಕಲ್ಲುಗಣಿ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಅಕ್ರಮ ಗಣಿಗಾರಿಕೆ ಮಾಡುತ್ತಿರುವುದು ಕಂಡುಬಂದಿರುವುದರಿಂದ ದಿ.4.5.2016, 1.3.2017 ಮತ್ತು 19.7.2017ರಂದು ದಂಡ ವಿಧಿಸಿರುತ್ತಾರೆಂದು ಹೇಳಿರುತ್ತಾರೆ. ಕರ್ನಾಟಕ ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆಯುವ ಪೂರ್ವದಲ್ಲಿಯೇ ಟಿ.ಎನ್.ಚಂದ್ರಶೇಖರ್ ಅವರು ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದು ಕಂಡುಬರುತ್ತದೆ.

9. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕಲ್ಲುಪುಡಿ ಘಟಕದ ಮಾಲೀಕರಾದ ಟಿ.ಎನ್.ಚಂದ್ರಶೇಖರ್ ಅವರನ್ನು ವಿಚಾರಿಸಿದಾಗ 1991ರಿಂದ 2013ರವರೆಗೆ

ಕಾನೂನಿನನ್ವಯ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸಿದ್ದು ಹಾಗೂ 2013ರ ನಂತರ ಕ್ರಷರ್ ಘಟಕವನ್ನು ಸ್ಥಗಿತಗೊಳಿಸಿದ್ದಾರೆಂದು ತಿಳಿಸಿರುತ್ತಾರೆ. 1991ರಿಂದ 2013ರವರೆಗೆ ಟಿ.ಎನ್.ಚಂದ್ರಶೇಖರ್ ಅವರು ಪಡೆದ ಲೈಸೆನ್ಸ್ ಪ್ರತಿಯನ್ನು ಎದುರುದಾರರು ಹಾಜರುಪಡಿಸಿರುವುದಿಲ್ಲ.

10. ಸ.ನಂ.75ರಲ್ಲಿ 1 ಎಕರೆ ಪ್ರದೇಶದಲ್ಲಿ ಟಿ.ಎನ್.ಚಂದ್ರಶೇಖರ್ ಅವರಿಗೆ ಕಲ್ಲುಗಣಿಗಾರಿಕೆ ಮಾಡಲು 31.3.2020ರವರೆಗೆ ಗುತ್ತಿಗೆ ಸಂ.1040ನ್ನು ಮಂಜೂರು ಮಾಡಲಾಗಿದೆಯೆಂದು ಎದುರುದಾರರು ತಿಳಿಸಿರುತ್ತಾರೆ. ಆದರೆ ಸದರಿ ಗುತ್ತಿಗೆ ಮಂಜೂರಾತಿ ಪತ್ರದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಯಾವ ದಿನಾಂಕದಿಂದ ಸದರಿ ಗುತ್ತಿಗೆ ಸಂ.1040ನ್ನು ಮಂಜೂರು ಮಾಡಲಾಗಿದೆಯೆಂದು ಎದುರುದಾರರು ತಿಳಿಸಿರುವುದಿಲ್ಲ. ಕಾರಣ ಟಿ.ಎನ್.ಚಂದ್ರಶೇಖರ್ ಅವರು ಅಕ್ರಮವಾಗಿ ಕಲ್ಲುಗಣಿಗಾರಿಕೆ ನಡೆಸುತ್ತಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಲ್ಲದೆ ಎದುರುದಾರರು ದಿ.31.5.2016ರಂದು 1,62,000/-, ದಿ.1.3.2017ರಂದು ರೂ. 3.24 ಲಕ್ಷಗಳು ಮತ್ತು ದಿ.19.7.2017ರಂದು ರೂ.22.50 ಲಕ್ಷಗಳು, ಒಟ್ಟು 27. 36 ಲಕ್ಷಗಳನ್ನು ಟಿ.ಎನ್.ಚಂದ್ರಶೇಖರ್ ಅವರಿಗೆ ದಂಡ ವಿಧಿಸಿದ್ದು ಆದ್ದರಿಂದ ಚಂದ್ರಶೇಖರ್ ಅವರು ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವುದು ಸಾಬೀತಾಗುತ್ತದೆ.

11. ದೂರಿನಲ್ಲಿ ಚಂದ್ರಶೇಖರ್ ಅವರು ತಿರುವನಹಳ್ಳಿ ಗ್ರಾಮಕ್ಕೆ ಹತ್ತಿರವಿರುವ ಸರ್ವೆ ನಂ.80 ಮತ್ತು 138ರಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಆದರೆ ಎದುರುದಾರರು ಸ.ನಂ.80 ಮತ್ತು 138ರಲ್ಲಿ ಗಣಿಗಾರಿಕೆ ಮಾಡುತ್ತಿರುವುದನ್ನು ತಮ್ಮ ಆಕ್ಷೇಪಣೆಯಲ್ಲಿ ಅಲ್ಲಗಳೆದಿರುವುದಿಲ್ಲ. ದೂರುದಾರರು ಸದರಿ ಚಂದ್ರಶೇಖರ್ ಅವರು ಸಿಡಿಮದ್ದು ಉಪಯೋಗಿಸಿ ಗಣಿಗಾರಿಕೆ ಮಾಡುತ್ತಿದ್ದಾರೆಂದು ಆಪಾದಿಸಿರುತ್ತಾರೆ. ಈ ವಿಚಾರವಾಗಿ ಎದುರುದಾರರು ಚಂದ್ರಶೇಖರ್ ಅವರು ಸಿಡಿಮದ್ದು ಉಪಯೋಗಿಸಲು ಅನುಮತಿ ಪಡೆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

12. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994ರ ತಿದ್ದುಪಡಿ ಅಧಿನಿಯಮ ಕಂಡಿಕೆ 8(5)ರ ಪ್ರಕಾರ ಯಾವುದೇ ಸಣ್ಣ ಗಣಿಗಳಿಗೆ ಪರವಾನಿಗೆ ನೀಡುವ ಅಥವಾ ನವೀಕರಿಸುವ ಪೂರ್ವದಲ್ಲಿ ಈ ಕೆಳಗಿನ ಅಧಿಕಾರಿಗಳನ್ನು ಸಂಪರ್ಕಿಸಿ

1) ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್ ಅವರಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಪಡೆಯಬೇಕು.
2) ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ಉಪಅರಣ್ಯ ಸಂರಕ್ಷಣಾಧಿಕಾರಿಗಳಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಪಡೆಯಬೇಕು.
3) ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ತಾಂತ್ರಿಕ ವರದಿ ಹಾಗೂ ಜಿಪಿಎಸ್ ಕೋ ಆರ್ಡಿನೇಟ್ಸ್ ಒಳಗೊಂಡ ನಕಾಶೆಗೆ ಅನುಮೋದನೆ ಪಡೆಯಬೇಕು.

4) ಪರವಾನಿಗೆ ನೀಡಬೇಕಾಗಿರುವ ಗಣಿ ಗುತ್ತಿಗೆ ಜಮೀನು ಗೋಮಾಳ ಅಥವಾ ಖರಾಬು ಪ್ರದೇಶವಾಗಿದ್ದರೆ ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ಆಯುಕ್ತರಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಪಡೆಯಬೇಕು.

13. ನಂತರ ಈ ಪ್ರಸ್ತಾವನೆಯನ್ನು ಹಿರಿಯ ಭೂವಿಜ್ಞಾನಿಗಳು ಪರಿಶೀಲಿಸಿ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು. ಪ್ರಸ್ತುತ ಪ್ರಕರಣದಲ್ಲಿ ಎದುರುದಾರರು ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಯವರ ಅನುಮೋದನೆ ಪಡೆದಿರುವುದು ಕಂಡುಬರುವುದಿಲ್ಲ.

14. ದೂರುದಾರರು ಹಾಜರುಪಡಿಸಿದ ಸರ್ಟಿಫಿಕೇಟ್ ಆಫ್ ಕಂಪ್ಲಯನ್ಸ್‌ನಲ್ಲಿ ಟಾಸ್ಕ್ ಫೋರ್ಸ್‌ನಿಂದ ' ಫಾರ್ಮ್ ಸಿ' ಪಡೆದ ನಂತರ ಚಂದ್ರಶೇಖರ್ ಅವರಿಗೆ ಕಲ್ಲುಪುಡಿ ಘಟಕ ನಡೆಸಲು ಅನುಮತಿ ದೊರಕುತ್ತದೆ ಎಂದು ತಿಳಿಸಿದೆ. ಸದರಿ ಚಂದ್ರಶೇಖರ್ ಅವರಿಗೆ ಫಾರ್ಮ್ ಸಿ ನೀಡಿದ ಬಗ್ಗೆ ಯಾವದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕಾರಣ ಚಂದ್ರಶೇಖರ್ ಅವರು ಫಾರ್ಮ್-ಸಿ ಪಡೆಯದೆ ಅಕ್ರಮವಾಗಿ ಕಲ್ಲುಗಣಿಗಾರಿಕೆ ಮಾಡುತ್ತಿರುವುದು ಮತ್ತು ಕಲ್ಲು ಪುಡಿ ಘಟಕವನ್ನು ಪ್ರಾರಂಭಿಸಿರುವುದು ಕಂಡುಬರುತ್ತದೆ.

15. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ (3)ರ ಪ್ರಕಾರ ಅನುಮತಿ ಇಲ್ಲದೆ ಯಾವುದೇ ವ್ಯಕ್ತಿ ಕಲ್ಲುಗಣಿಗಾರಿಕೆ ಮಾಡುವಂತಿಲ್ಲ. ಕಲಂ.21 ಆಫ್ ಮೈನ್ಸ್ ಅಂಡ್ ಮಿನರಲ್ಸ್ ಕಾಯ್ದೆಯ ಪ್ರಕಾರ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದರೆ ಸದರಿ ವ್ಯಕ್ತಿಯನ್ನು 2 ವರ್ಷದ ವರೆಗೆ ಶಿಕ್ಷೆ ಅಥವಾ 25,000/-ವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದೆಂದು ಇರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಎದುರುದಾರರು ಈಗಾಗಲೇ 3 ಬಾರಿ ಚಂದ್ರಶೇಖರ್ ಅವರು ಅಕ್ರಮವಾಗಿ ಗಣಿಗಾರಿಕೆ ಮಾಡಿದ್ದಕ್ಕೆ ದಂಡವಿಧಿಸಿರುತ್ತಾರೆ. ಆದರೆ ಚಂದ್ರಶೇಖರ್ ಅವರ ವಿರುದ್ಧ ಯಾವುದೇ ಕ್ರಿಮಿನಲ್ ಕೇಸುಗಳನ್ನು ದಾಖಲಿಸಿರುವುದಿಲ್ಲ. ಎದುರುದಾರರು ಕ್ರಿಮಿನಲ್ ಕೇಸ್ ದಾಖಲಿಸದೆ ಕರ್ತವ್ಯಲೋಪವೆಸಗಿದ್ದು ಕಂಡುಬರುತ್ತದೆ. ಎದುರುದಾರರು ಮಂಡ್ಯ ತಾಲ್ಲೂಕಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಮುಖ್ಯಸ್ಥರಾಗಿ ತಿರುವನಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆಯನ್ನು ತಡೆಯಲು ವಿಫಲರಾಗಿರುತ್ತಾರೆ. ಚಂದ್ರಶೇಖರ್ ಅವರು ಮಂಡ್ಯ ಜಿಲ್ಲಾ ಟಾಸ್ಕ್ ಫೋರ್ಸ್‌ನಿಂದ ಫಾರ್ಮ್ ಸಿ ಪಡೆಯದೆ ಕಲ್ಲು ಘಟಕವನ್ನು ಸ್ಥಾಪಿಸಿ ಪ್ರಾರಂಭಿಸಿದ್ದರೂ ಕೂಡ ಅದನ್ನು ತಡೆಯಲು ಯಾವುದೇ ಕ್ರಮಕ್ಕೈಗೊಳ್ಳದೆ, ಕರ್ತವ್ಯಲೋಪವೆಸಗಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ.

16. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ನಾಗಮಂಗಲ ತಾಲ್ಲೂಕು ತಿರುವನಹಳ್ಳಿ ಗ್ರಾಮದಲ್ಲಿ ಟಿ.ಎನ್.ಚಂದ್ರಶೇಖರ್ ಬಿನ್ ನಾರಾಯಣ ಗೌಡ ಅವರು ನಡೆಸುತ್ತಿರುವ ಅಕ್ರಮ

N. Anand

ಗಣಿಗಾರಿಕೆ ತಡೆಯಲು ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

17. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand
3/12/18

**(ನ್ಯಾಯಮೂರ್ತಿ ಎನ್.ಆನಂದ )**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

3/12